ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/21/2016-17. ದಿನಾಂಕ:06-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಕೆ.ಮಹಮ್ಮದ್ ಅಲಿ ಸಾಬ್ ತಂದೆ ಲೇಟ್ ರಹಿಮಾನ್ ಸಾಬ್ ಕೊಟ್ಟೂರು ಪಟ್ಟಣ<br>2)ಎ.ನಾಗೇಂದ್ರಪ್ಪ ತಂದೆ ಅಣಜಿ ರಾಮಲಿಂಗಪ್ಪ ಸುಟ್ಟುಕೋಡಿಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು | ಎ.ನಿಂಗಪ್ಪ ತಂದೆ ಲೇಟ್ ಎ.ರಾಮಲಿಂಗಪ್ಪ ಸುಟ್ಟುಕೋಡಿಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಕೋಡಿಹಳ್ಳಿ ಗ್ರಾಮದ ಸನಂ 134ಎಪೈಕಿ. ವಿಸ್ತೀರ್ಣ 0-79. ಸೆಂಟ್ಸು ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕೋಡಿಹಳ್ಳಿ ಗ್ರಾಮದ ಸನಂ 134ಎಪೈಕಿ. ವಿಸ್ತೀರ್ಣ 0-79. ಸೆಂಟ್ಸು ಜಮೀನನ್ನು ಸದರಿ ತಾಲೂಕು ಸುಟ್ಟುಕೋಡಿಹಳ್ಳಿ ಗ್ರಾಮದ ಎ.ನಾಗೇಂದ್ರಪ್ಪ ತಂದೆ ಅಣಜಿ ರಾಮಲಿಂಗಪ್ಪ ಇವರಿಂದ ಸದರಿ ತಾಲೂಕು ಕೊಟ್ಟೂರು ಪಟ್ಟಣದ ಕೆ.ಮಹಮ್ಮದ್ ಅಲಿ ಸಾಬ್ ತಂದೆ ಲೇಟ್ ರಹಿಮಾನ್ ಸಾಬ್ ಇವರು ದಿನಾಂಕ 16-04-2016 ರ ಡಾಕ್ಯುಮೆಂಟ್ ನಂಬರ್: 158/2016-17 ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕೋಡಿಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 20-04-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಸುಟ್ಟಕೋಡಿಹಳ್ಳಿ ಗ್ರಾಮದ ಎ.ನಿಂಗಪ್ಪ ತಂದೆ ಲೇಟ್ ಎ.ರಾಮಲಿಂಗಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 10/2015-16. ದಿನಾಂಕ 18-05-2016. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 21-07-2016 ರಿಂದ 06-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಕೋಡಿಹಳ್ಳಿ ಗ್ರಾಮದ ಸನಂ 134ಎಪೈಕಿ. ವಿಸ್ತೀರ್ಣ 0-79. ಸೆಂಟ್ಸು ಜಮೀನನ್ನು ಸದರಿ ತಾಲೂಕು ಸುಟ್ಟಕೋಡಿಹಳ್ಳಿ ಗ್ರಾಮದ ಎ.ನಾಗೇಂದ್ರಪ್ಪ ತಂದೆ ಅಣಜಿ ರಾಮಲಿಂಗಪ್ಪ. ಇವರಿಂದ ಸದರಿ ತಾಲೂಕು ಕೊಟ್ಟೂರು ಪಟ್ಟಣದ ಕೆ.ಮಹಮ್ಮದ್ ಅಲಿ ಸಾಬ್ ತಂದೆ ಲೇಟ್ ರಹಿಮಾನ್‌ಸಾಬ್ ಇವರು ದಿನಾಂಕ 16-04-2016 ರ ಡಾಕ್ಯುಮೆಂಟ್ ನಂಬರ್: 158/2016-17.ರ ಪ್ರಕಾರ ರೂ: 87.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ.

ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿದ್ದು ಸದರಿ ಸ್ವತ್ತಿನ ವರ್ಗಾವಣೆಯ ಬಗ್ಗೆ ಯಾವುದೇ ಆದೇಶವನ್ನು ಹೊರಡಿಸಿರುವುದಿಲ್ಲ ಹಾಗೂ ವಿವಾದಿತ ಸ್ವತ್ತಿನ ಅರ್ಜಿದಾರರಿಗೆ ಪಿತ್ರಾರ್ಜಿತವಾಗಿ ಬಂದಿದ್ದು

ಪು.ತಿ.ನೋ:-2

ಅದನ್ನು ಮಾರಾಟ ಮಾಡುವ ಹಕ್ಕು ಅರ್ಜಿದಾರರಿಗೆ ಇರುವುದರಿಂದ ನೊಂದಾಯಿತ ಖರೀದಿ ಪತ್ರವನ್ನು ರದ್ದು ಪಡಿಸುವ ಅಧಿಕಾರ ಕಂದಾಯ ನ್ಯಾಯಾಲಯಕ್ಕೆ ವ್ಯಾಪ್ತಿಗೆ ಒಳಪಡದೇ ಇರುವ ಕಾರಣ ಕ್ರಯ ಪತ್ರದನ್ವಯ ಕ್ರಯದಾರರಾದ ಕೆ.ಮಹಮ್ಮದ್ ಅಲಿ ಸಾಬ್ ತಂದೆ ಲೇಟ್ ರಹಿಮಾನ್ ಸಾಬ್ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಸ್ವತ್ತು ಏಕತ್ರ ಕುಟುಂಬದ ಆಸ್ತೀಯಾಗಿದ್ದು ಅದರಲ್ಲಿ ತಕರಾರುದಾರರಿಗೂ ಪಾಲು ಬರುವುದರಿಂದ ಇಂತಹ ಸ್ವತ್ತನ್ನು ಹಕ್ಕು ಬದಲಾವಣೆ ಮಾಡಲು ಈ ಪ್ರಕರಣವು ಮಾನ್ಯ ಸಿವಿಲ್ ನ್ಯಾಯಾಲಯ ಮುಂದೆ ಇದ್ದಾಗ ಬರುವುದಿಲ್ಲವೆಂದು ಹಾಗೂ ತಮ್ಮ ಕಕ್ಷಿದಾರರಿಗೆ ವಿವಾದಿತ ಸ್ವತ್ತಿನಲ್ಲಿ ಹಕ್ಕು ಇರುವುದರಿಂದ ಅದರ ಹಕ್ಕು ಬದಲಾವಣೆಗೆ ಆಕ್ಷೇಪಣೆ ಇರುವುದಾಗಿ ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಕಂದಾಯ ನ್ಯಾಯಾಲಯಕ್ಕೆ ನೊಂದಾಯಿತ ಕ್ರಯ ಪತ್ರವನ್ನು ರದ್ದು ಪಡಿಸುವ ಅಧಿಕಾರ ಇಲ್ಲದಿರುವುದರಿಂದ ಕರ್ನಾಟಕ ಭೂಕಂದಾಯ ಕಾಯ್ದೇ 1964 ರ ಕಲಂ 128 ರ ಅಡಿಯಲ್ಲಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕೋಡಿಹಳ್ಳಿ ಗ್ರಾಮದ ಸನಂ 134ಎಪೈಕಿ. ವಿಸ್ತೀರ್ಣ 0-79. ಸೆಂಟ್ಸು ಜಮೀನನ್ನು ದಿನಾಂಕ 16-04-2016 ರ ಡಾಕ್ಯುಮೆಂಟ್ ನಂಬರ್: 158/2016-17 ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಕೆ.ಮಹಮ್ಮದ್ ಅಲಿ ಸಾಬ್ ತಂದೆ ಲೇಟ್ ರಹಿಮಾನ್ ಸಾಬ್ ಕೊಟ್ಟೂರು ಪಟ್ಟಣ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 06-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ, ಕೊಟ್ಟೂರು
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕೆ.ಮಹಮ್ಮದ್ ಅಲಿ ಸಾಬ್ ತಂದೆ ಲೇಟ್ ರಹಿಮಾನ್ ಸಾಬ್ 08 ನೇ ವಾರ್ಡಾ ಬಳ್ಳಾರಿ ಕ್ಯಾಂಪ್ ಕೊಟ್ಟೂರು ಪಟ್ಟಣ ಎ.ನಾಗೇಂದ್ರಪ್ಪ ತಂದೆ ಅಣಜಿ ರಾಮಲಿಂಗಪ್ಪ ಸುಟ್ಟಕೊಡಿಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಟಿ.ರಮೇಶ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎ.ನಿಂಗಪ್ಪ ತಂದೆ ಎ.ರಾಮಲಿಂಗಪ್ಪ.ಸುಟ್ಟಕೋಡಿಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಡಿ.ಲಿಂಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.